ಒ.ಎಸ್. 22 /2018

ಡಿ.ಡಬ್ಲ್ಯು. - 01

**ದಿನಾಂಕ 28-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು -1 ಮತ್ತು 2 ನೇ ಪ್ರತಿವಾದಿಯರ ಪರ ಡಿ.ಎಸ್ ವಕೀಲರಿಂದಃ**

ನಿಡಿ-26 ನ್ನು ನಾನು ಯಾವುದೇ ಅಧಿಕಾರ ಇಲ್ಲದೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಡಿ-26 ನ್ನು ಜಿಪಿಎ ಆದಾರದ ಮೇಲೆ ಬರೆದುಕೊಟ್ಟಿರುತ್ತೇನೆ. ನಿಡಿ 26 ಬರೆದುಕೊಡುವಾಗ ನಾನು ಹೇಳುವಂತಹ ಜಿಪಿಎ ರದ್ದಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಃ ಮುಂದುವರಿದು ಜಿಪಿಎನ್ನು ರದ್ದು ಮಾಡಿದ್ದರೂ ಕೂಡ ಬಾಯಿ ಮಾತಿನಲ್ಲಿ ನನಗೆ ಅಧಿಕಾರ ಕೊಟ್ಟಿದ್ದರು. ಆ ರೀತಿ ಬಾಯಿ ಮಾತಿನಲ್ಲಿ ಯಾವುದೇ ಅಧಿಕಾರ ನನಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಡಿ 26 ಮಾಡುವ ಒಂದು ವಾರದ ಮೊದಲು ನನಗೆ ಬಾಯಿ ಮಾತಿನಲ್ಲಿ ಅಧಿಕಾರ ಕೊಟ್ಟಿದ್ದರು .ನಿಮ್ಮ ಹೆಂಡತಿಯನ್ನು ಈ ದಾವೆಯಲ್ಲಿ ಸಾಕ್ಷಿಯಾಗಿ ವಿಚಾರಣೆ ಮಾಡುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮಾಡುವುದಿಲ್ಲ ನಾನೇ ಹೇಳುತ್ತೇನೆ ಎಂದು ತಿಳಿಸಿರುತ್ತಾರೆ . ನಿಡಿ 25 ನನ್ನ ಹೆಂಡತಿ ನೀಡಿದ ನೋಟಿಸು ಎಂದರೆ ಸರಿ . ನಿಡಿ 25 ರಲ್ಲಿರುವ ಒಕ್ಕಣೆ ಬಗ್ಗೆ ನನ್ನ ತಕರಾರು ಇಲ್ಲ . ನಿಡಿ 26 ಮಾಡಿಕೊಡಲು ನನಗೆ ಬಾಯಿ ಮಾತಿನ ಮೂಲಕ 1 ಮತ್ತು 2 ನೇ ಪ್ರತಿವಾದಿಗಳು ಅಧಿಕಾರ ಕೊಟ್ಟರು ಎನ್ನುವ ವಿಷಯವನ್ನು ಈಗ ಹೇಳುತ್ತಿರುವುದನ್ನು ಬಿಟ್ಟರೇ ಈ ಮೊದಲು ಎಲ್ಲಿಯಾ ಕೂಡ ಪ್ರಸ್ತಾಪ ಮಾಡಿಲ್ಲ . ಸಾಕ್ಷಿ ಮುಂದುವರಿದು ಮನೆಯಲ್ಲಿ ಈ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗಳ ಸಮಕ್ಷಮ ಮಾತನಾಡಿದ ನಂತರ ನಿಡಿ 26 ನ್ನು ಬರೆದುಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ . 1 ಮತ್ತು 2 ನೇ ಪ್ರತಿವಾದಿಯನ್ನು ಬಿಟ್ಟರೇ ಆ ಸಮಯದಲ್ಲಿ ಮಾತುಕತೆ ಆಗುವಾಗ ಬೇರೆ ಯಾರು ಇರಲಿಲ್ಲ . ಆ ರೀತಿ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

ನನ್ನ ಪ್ರಮಾಣ ಪತ್ರ 3 ನೇ ಪ್ಯಾರಾದಲ್ಲಿ ಗೋವಿಂದರಾಜ ಹೆಗ್ಡೆ ಎಂದು ಪ್ರಸ್ತಾಪ ಮಾಡಿದ್ದೇನೆ ಎಂದರೆ ನನಗೆ ನೆನಪಿಲ್ಲ . ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಗೋವಿಂದರಾಜ ಹೆಗ್ಡೆ ರವರಿಗೆ 3 ಜನ ಮಕ್ಕಳು. ಗೋವಿಂದರಾಜ ಹೆಗ್ಡೆ ರವರಿಗೆ ಲೀಲಾವತಿ ಎನ್ನುವ ಸಹೋದರಿ ಇದ್ದರು. ಲೀಲಾವತಿ ಎಂದರೆ 1 ಮತ್ತು 2 ನೇ ಪ್ರತಿವಾದಿಯ ತಾಯಿ. ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ 3 ರಲ್ಲಿ ಹೇಳಿರುವ ಜಲಜಾಕ್ಷಿ ಹೆಗ್ಡೆ ರವರಿಗೆ ಶಂಕರ ಹೆಗ್ಡೆ ಎನ್ನುವ ಸಹೋದರ ಇದ್ದ. ಶಂಕರ ಹೆಗ್ಡೆಗೆ ಮಕ್ಕಳು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಡಾ. ಬಿ.ಎಂ ಹೆಗ್ಡೆ ರವರ ತಂದೆ ಜಲಜಾಕ್ಷಿ ಹೆಗ್ಡೆ ರವರ ಸಹೋದರ .

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ4 ರಲ್ಲಿ ಮೂಲಗೇಣಿ ಒಕ್ಕಲುಗಳ ಸರ್ವೇ ನಂ 159/3 ರಲ್ಲಿ 1 ಎಕ್ರೆ 21.5 ಸೆಂಟ್ಸ್ ಜಾಗ ಮೂಲಗೇಣಿ ಜಾಗವಾಗಿರುತ್ತದೆ . ಸ್ವಾಧೀನ ಇರುವ ಒಕ್ಕಲುಗಳ ಹೆಸರು ನನಗೆ ನೆನಪಿಲ್ಲ. ಈಗ ಒಕ್ಕಲು ಇದ್ದವರು ತೀರಿಕೊಂಡಿದ್ದು ಅವರ ಮಕ್ಕಳು ಇರುತ್ತಾರೆ . ದಾವಾ ಸ್ವತ್ತಿನಲ್ಲಿ ಎಷ್ಟು ಕಟ್ಟಡಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಪೈಕಿ ಎಷ್ಟು ಸ್ವತ್ತುಗಳು ಭೂ ಸ್ವಾಧೀನಗೊಂಡಿದೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ . ಅವಾರ್ಡ್ ನನ್ನ ಹೆಂಡತಿ ಹೆಸರಿಗೆ ಆಗಿದೆ. ಆದರೇ ಇನ್ನೂ ಕೂಡ ಪರಿಹಾರ ಕೊಟ್ಟಿಲ್ಲ. ಪರಿಹಾರ ಸಿಗದೇ ಇರಲು

ಬೇರೆಯವರು ಆಕ್ಷೇಪಣೆ ಸಲ್ಲಿಸಿರುತ್ತಾರೆ . ಆ ಪರಿಹಾರದಲ್ಲಿ ಭೂಮಿ ಮತ್ತು ಕಟ್ಟಡ ಎರಡೂ ಸೇರಿದೆ ಎಂದರೆ ಸರಿ. ಸದರಿ ಕಟ್ಟಡ ನನ್ನ ಹೆಂಡತಿಯ ಸ್ವಾಧೀನದಲ್ಲಿತ್ತು. ನನ್ನ ಹೆಂಡತಿ ಸದರಿ ಕಟ್ಟಡಕ್ಕೆ ಕಟ್ಟಡ ತೆರಿಗೆ ಪಾವತಿ ಮಾಡಿಲ್ಲ. ಡೋರ್ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಯಾರು ಯಾರು ಸ್ವಾಧೀನ ಹೊಂದಿದ್ದಾರೆ ಎಂದು ನನಗೆ ಹೇಳಲು ಸಾದ್ಯವಿಲ್ಲ. ನಾನು ಕೂಡ ದಾವಾ ಸ್ವತ್ತಿನ ಕುಟುಂಬಕ್ಕೆ ಸೇರಿದವನು . ನಾನು ಕುಸುಮವತಿಯ ಮಗಳ ಮಗ . ನನ್ನ ತಾಯಿ 1 ನೇ ವಾದಿಯ ಸಹೋದರಿ. ನನ್ನ ತಾಯಿಯ ಹೆಸರು ವೇದಾವತಿ ಹೆಗ್ಡೆ. ವೇದಾವತಿ ಹೆಗ್ಡೆಗೆ 4 ಜನ ಮಕ್ಕಳು, 2 ಗಂಡು ಮತ್ತು 2 ಹೆಣ್ಣು . ನಿಡಿ-2 ರ ವಾಚಕಗಳನ್ನು ನಾನು ಒಪ್ಪುವುದಿಲ್ಲ ಕಾರಣ ಜಲಜಾಕ್ಷಿ ಹೆಗ್ಡೆ ಇವರಿಗೆ ನಿಸಂತತಿ ಎಂದು ಬರೆದಿರುವುದು ತಪ್ಪಾಗಿರುತ್ತದೆ. ಬೇರೆ ಯಾವುದೇ ಕಾರಣ ಇಲ್ಲ. ಜಲಜಾಕ್ಷಿ ಹೆಗ್ಡೆರವರ ಕವರ್ ಈಗಲೂ ಕೂಡ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ಈ ದಾವೆಯ ಪಕ್ಷಗಾರರು ನಿಡಿ-19 ರಲ್ಲಿ ಕಾಣುವ ದಾವೆಯಲ್ಲಿರುವ ಪಕ್ಷಗಾರರು ಅಲ್ಲ. ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ನಿಡಿ 21 ದಾವೆಯಲ್ಲಿ ಪಕ್ಷಗಾರರಲ್ಲ ಎಂದರೆ ಸರಿ .

ನನ್ನ ಮುಖ್ಯವಿಚಾರಣೆಯ ಪ್ಯಾರಾ 10 ರಲ್ಲಿ all the family members agreed ಎಂದು ಬರೆದಿರುವ ಬಗ್ಗೆ ಏನು ಹೇಳುವಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಯೋಚಿಸಿ ಮುಂದಿನ ಬಾರಿ ಹೇಳುತ್ತೇನೆ ಎಂದು ತಿಳಿಸಿರುತ್ತಾರೆ . ಈ ಮೇಲೆ ಹೇಳಿದ ವಾಕ್ಯವನ್ನು ನಾನು ಹೇಳಿರಬಹುದು ಆದರೇ ನೆನಪಿಲ್ಲ . ಕಳೆದ 1 ವರ್ಷದಿಂದ ನನಗೆ ನೆನಪಿನ ಶಕ್ತಿ ಸ್ವಲ್ಪ ಕಡಿಮೆಯಾಗಿದೆ . ನನಗೆ ಈಗ 72 ವರ್ಷ . ನೆನಪಿನ ಶಕ್ತಿ ಕಡಿಮೆಯಾದ ಬಗ್ಗೆ ನಾನು ವೈದ್ಯರಿಂದ ಚಿಕಿತ್ಸೆ ಪಡೆದಿಲ್ಲ . ನನಗೆ ಮುಖ್ಯ ವಿಚಾರಣೆ ಮಾಡುವಾಗ ಏನು ನೆನಪು ಇತ್ತು ಅದು ಈಗಲೂ ಕೂಡ ನೆನಪು ಇದೆ ಎಂದರೆ ಸರಿಯಲ್ಲ. ಸತ್ಯವನ್ನು ಮರೆಮಾಚಲು ನೆನಪಿನ ಶಕ್ತಿ ಕಡಿಮೆಯಾಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.

ಒ.ಎಸ್.  22 /2018

ಡಿ.ಡಬ್ಲ್ಯು. - 01